**Code No. 20 X**

**ವಾಣಿಜ್ಯ ಪರೀಕ್ಷೆಗಳು**

# ಕನ್ನಡ ಶೀಘ್ರಲಿಪಿ — ಪ್ರಥಮ ದರ್ಜೆ — ಪ್ರಥಮ ಪತ್ರಿಕೆ

## (ವೇಗ)

ಜುಲೈ, 2015

ವೇಳೆ { ಉಕ್ತಲೇಖನ : 10 ನಿಮಿಷಗಳು
ಲಿಪಿ ಬರಹ : 1 ಗಂಟೆ 30 ನಿಮಿಷಗಳು }

ಪರಮಾವಧಿ ಅಂಕಗಳು : 100

***ಓದುಗರಿಗೆ ಸೂಚನೆಗಳು :***

1) ಈ ಕೆಳಗೆ ಕೊಟ್ಟಿರುವ ವಿಷಯವನ್ನು ಒಂದು ನಿಮಿಷಕ್ಕೆ ಇನ್ನೂರು (200) ಅಕ್ಷರಗಳ ವೇಗದಲ್ಲಿ ಪ್ರಶ್ನೆ ಪತ್ರಿಕೆಯಲ್ಲಿ ಸೂಚಿಸಿದ ರೀತಿಯಲ್ಲೇ ಓದತಕ್ಕದ್ದು.

2) ಉಕ್ತಲೇಖನ ಮುಗಿದ ನಂತರ ಅಭ್ಯರ್ಥಿಗಳು ಅವರ ಶೀಘ್ರಲಿಪಿಯನ್ನು ಕನ್ನಡ ಲಿಪಿಗೆ ಪರಿವರ್ತನೆ ಮಾಡಿ ಬರೆಯಲು ಸೂಚಿಸತಕ್ಕದ್ದು.

---

ಮಹಾಶಯರೆ,

ನಮಗೆ ಅಗತ್ಯವಿರುವ ಎಲ್ಲಾ ವಸ್ತುಗಳು
ಒಂದೇ ಅಂಗಡಿಯಲ್ಲಿ ಸಿಗುವುದೆಂದು ತಿಳಿದ
$\frac{1}{4}$ ಬಳಿಕ ಮಾರ್ಕೆಟ್ಟಿನ ಎಲ್ಲಾ ಅಂಗಡಿಗಳಿಗೂ/
ಏಕೆ ಅಲೆಯಬೇಕು ? ಇದರಿಂದ ಸಮಯ
ವ್ಯರ್ಥವೇ ಹೊರತು ಮತ್ತೆ ಯಾವ
ಪ್ರಯೋಜನವೂ ಇಲ್ಲ. ಹಾಗೆಯೇ ನಾವು
$\frac{1}{2}$ ಗುರುವನ್ನು ಪಡೆದ ಬಳಿಕ ಅಲೆದಾಡು/ವುದನ್ನು
ನಿಲ್ಲಿಸಿ ಗುರಿಯತ್ತ ಸಾಗಲು ಪ್ರಯತ್ನ
ಮಾಡಬಹುದು.

ಸಾಧಕನಿಗೆ ಗುರುವು ಅತ್ಯಗತ್ಯ. ಒಂದು
ವೇಳೆ ಕೊಳದ ಅಂಚಿಗೆ ಮಗುವು ಹೋದಲ್ಲಿ
ತಾ/ಯಿಯಾದವಳು ಅದರಿಂದಾಗುವ $\frac{3}{4}$
ಅಪಾಯವನ್ನು ತಿಳಿಸಿ ಮಗುವನ್ನು ಹಿಂದಕ್ಕೆ
ಕರೆತರುತ್ತಾರೆ. ಇದೇ ರೀತಿ, ಅಗತ್ಯವಿದ್ದಾಗ
ಗುರುವು ಸೂಕ್ತ ಸಲಹೆXಗಳನ್ನು ಕೊಡುತ್ತಾರೆ. 1
ಸದಾ ಗುರುವಿನ ಗಮನವು ಶಿಷ್ಯನ ಮೇಲೆಯೇ
ಇರುತ್ತದೆ.

ದೇವರು ಸರ್ವವ್ಯಾಪ್ತಿ ನಿಜ, ಆದರೂ
ಗುರುವಿನ ಸಾನಿಧ್ಯ ಅನುಪಮ/ವಾದುದು. $\frac{1}{4}$
ಎಲ್ಲೆಡೆಯೂ ಗಾಳಿಯು ಬೀಸುತ್ತಿದ್ದರೂ ಮರದ
ನೆರಳಿನಲ್ಲಿ ನಾವು ಹಿತಕರವಾದ ಗಾಳಿಯ
ತಂಪನ್ನು ಅನುಭವಿಸುತ್ತೇವೆ. ಮರದ
ಎಲೆಗ/ಳ ಮೂಲಕ ಹಾದುಬಂದ ತಂಗಾಳಿಯ $\frac{1}{2}$

ಹಿತವಾದ ಅನುಭವ ಬಿಸಿಲಿನಲ್ಲಿ ಪ್ರಯಾಣ
ಮಾಡುವವರ ಮೇಲೆ ಹೇಗೆ ಆಗುತ್ತಿದೆಯೋ
$\frac{3}{4}$ ಹಾಗೆಯೇ, ಪ್ರಾಪಂಚಿಕ ಜೀ/ವನದಲ್ಲಿ
ತೊಳಲಾಡುವ ನಮಗೆ ಗುರುವು ಅತ್ಯಗತ್ಯ.
ಗುರುವಿನ ಸಾಮೀಪ್ಯ ನಮಗೆ ಶಾಂತಿ ಮತ್ತು
ಸಮಾಧಾನಗಳನ್ನು ನೀಡುತ್ತದೆ.

2 ನಮ್ಮ ಆಧ್ಯಾತ್ಮಿಕX ಪ್ರಗತಿಗೆ ಗುರುವಿನಲ್ಲಿ
ಸಂಪೂರ್ಣ ಶರಣಾಗತಿಯ ಭಾವ ನಮ್ಮಲ್ಲಿ
ಇರಬೇಕು. ಹುಡುಗನೊಬ್ಬ ಅಕ್ಷರ ಕಲಿಯುವಾಗ
$\frac{1}{4}$ ಉಪಾಧ್ಯಾಯನು ಅವನ ಬೆರ/ಳು ಹಿಡಿದು ಮರಳಲ್ಲಿ
ಬರೆಯುವುದನ್ನು ಕಲಿಸುತ್ತಾರೆ. ಹುಡುಗನ ಬೆರಳಿನ
ಚಲನೆಯು ಗುರುವಿನ ಹತೋಟಿಯಲ್ಲಿರುತ್ತದೆ.
$\frac{1}{2}$ ಹುಡುಗ ಅಹಂಕಾರ/ದಿಂದ ನಮಗೆಲ್ಲವೂ
ತಿಳಿದಿದೆ ಎಂದುಕೊಂಡಲ್ಲಿ ಮತ್ತು ಗುರುವಿಗೆ
ವಿಧೇಯನಾಗದಿದ್ದಲ್ಲಿ ಅವನು ಕಲಿಯಲು ಹೇಗೆ
ಸಾಧ್ಯ ?

$\frac{3}{4}$ ಪ್ರತಿಯೊಬ್ಬರಿಗೂ ಅವರ/ವರ ಅನುಭವಗಳೇ
ಗುರು. ಗುರುವಿನ ಬಗ್ಗೆ ನಾವು ಭಯ–ಭಕ್ತಿಯನ್ನು
ಹೊಂದಿರಬೇಕು. ಮೇಲಾಗಿ ಗುರುವಿನೊಂದಿಗೆ
3 ನಾವು ನಿಕಟವಾದ ಸಂಬಂಧ ಹೊಂದಿXರಬೇಕು
ಮತ್ತು ಗುರು ತನ್ನವನೇ ಎಂದು ಭಾವಿಸಬೇಕು.
ಗುರು–ಶಿಷ್ಯ ಸಂಬಂಧವು ಮಗುವು ತನ್ನ
ತಾಯಿಯೊಂದಿಗೆ ಹೊಂದಿರುವ
ಸಂಬಂಧದಂತಿರಬೇಕು. ತಾಯಿ/ ಮಗುವನ್ನು $\frac{1}{4}$
ಎಷ್ಟೇ ಹೊಡೆದು ದೂರತಳ್ಳಿದರೂ ಮಗುವು
ತಾಯಿಯನ್ನು ಇನ್ನೂ ಬಿಗಿಯಾಗಿ
ಹಿಡಿದುಕೊಳ್ಳುತ್ತದೆ. ಭಯಭಕ್ತಿಯು ಉನ್ನತಿಗೆ
ಸಹಾಯ ಮಾಡುತ್ತ/ದೆ. ಆದರೆ, ನಿಜವಾದ $\frac{1}{2}$
ಪ್ರಯೋಜನ ಗುರುವಿನ ನಿಕಟ ಸಂಬಂಧದಿಂದ
ಮಾತ್ರವೇ ದೊರಕುವುದು. ನಮ್ಮ ಭಕ್ತಿ ಮತ್ತು
ನಂಬಿಕೆಗಳು ಆಧ್ಯಾತ್ಮಿಕತೆಯ ಅ/ವಶ್ಯಮೂಲ $\frac{3}{4}$
ತತ್ವಗಳ ಅಡಿಪಾಯದ ಮೇಲೆ ನಿಂತಿರಬೇಕು.
ಅದಕ್ಕೆ ದೇಹ, ಮನಸ್ಸು ಮತ್ತು ಬುದ್ಧಿಶಕ್ತಿ
ಇವುಗಳ ಸಮರ್ಪಣೆ ಅಗತ್ಯ. ನಾವು
ಗುರುವಿXನಲ್ಲಿಟ್ಟ ನಂಬಿಕೆ ಮತ್ತು ವಿಧೇಯತೆಗಳು 4
ಮಾತ್ರ ಅಸೂಯೆಗಳನ್ನು ನಾಶ ಮಾಡುತ್ತದೆ.

ಬೀಜವೊಂದು ಚಿಗುರಲು ಅದನ್ನು
ಮರವೊಂದರ ನೆರಳಲ್ಲಿ ಬಿತ್ತ/ಬೇಕು. ನಂತರ $\frac{1}{4}$
ಅದು ಮೊಳಕೆಯೊಡೆದಾದ ಮೇಲೆ ಅದನ್ನು
ಸರಿಯಾದ ಜಾಗದಲ್ಲಿ ನಾಟಿ ಮಾಡಬೇಕು.
ಇಲ್ಲದಿದ್ದಲ್ಲಿ ಅದು ಸರಿಯಾಗಿ ಬೆಳೆಯುವುದಿಲ್ಲ./ $\frac{1}{2}$
ಹೀಗೆಯೇ, ಸಾಧಕ ಗುರುವಿನ ಸಾನಿಧ್ಯದಲ್ಲಿ
ಸ್ವಲ್ಪಕಾಲ ಇರಬೇಕು. ಕೊನೆಯ ಪಕ್ಷ ಎರಡು
ಅಥವಾ ಮೂರು ವರ್ಷಗಳಾದರೂ ಇರಬೇಕು.

$\frac{3}{4}$ ಇದಾದ ಮೇ/ಲೆ ಅವನು ಏಕಾಂತ ಪ್ರದೇಶದಲ್ಲಿ
ಸಾಧನೆಯನ್ನು ಮಾಡಬೇಕು. ಅವನ ಆಧ್ಯಾತ್ಮಿಕ
ಪ್ರಗತಿಗೆ ಇದು ಅಗತ್ಯ.

ನಿಜವಾದ ಗುರುವೊಬ್ಬ ಶಿಷ್ಯನ
5 ಪ್ರಗXತಿಯನ್ನಷ್ಟೇ ಬಯಸುತ್ತಾನೆ. ಶಿಷ್ಯನನ್ನು
ಸುಧಾರಿಸಲು ಮತ್ತು ಅವನ ದುರ್ಬಲತೆಗಳನ್ನು
ಹೋಗಲಾಡಿಸಲು ಗುರುವು ಪರೀಕ್ಷೆಗಳನ್ನು
$\frac{1}{4}$ ಒಡ್ಡುತ್ತಾನೆ. ಶಿ/ಷ್ಯನು ಮಾಡದಿರುವ
ತಪ್ಪುಗಳಿಗಾಗಿಯೂ ಗುರುವು ಅವನನ್ನು
ದೂಷಿಸಬಹುದು. ಅಂಥ ಪರೀಕ್ಷೆಗಳನ್ನು
ಧೈರ್ಯವಾಗಿ ಎದುರಿಸುವವರು ಮಾತ್ರ
$\frac{1}{2}$ ಪ್ರಗ/ತಿ ಹೊಂದಲು ಸಾಧ್ಯ. ನಿಜವಾದ
ಗುರುವನ್ನು ಅನುಭವದ ಮೂಲಕ ಮಾತ್ರ
ಗುರುತಿಸಲು ಸಾಧ್ಯ.

ಶಿಷ್ಯನೊಬ್ಬ ಕೆಲವೊಮ್ಮೆ ಗುರುವಿನ ಬಗ್ಗೆ
$\frac{3}{4}$ ಗುರು ತನ್ನವ/ನು ಮಾತ್ರವೇ ಎಂಬ ಮಮಕಾರ
ಭಾವವನ್ನು ಹೊಂದಿರುತ್ತಾನೆ. ಈ ಮಮಕಾರ
ಸುಲಭವಾಗಿ ನಾಶವಾಗಲಾರದು. ಶಿಷ್ಯನು
6 ಗುರುವಿನ ಬಹುಪಾಲು ಪ್ರೀತಿಯXನ್ನು ತಾನೇ
ಹೊಂದಬೇಕೆಂದು ಒಮ್ಮೊಮ್ಮೆ ಬಯಸಬಹುದು.
ಅವರಿಗೆ ಅದು ಸಿಗುತಿಲ್ಲ ಎಂದು ಕಂಡಲ್ಲಿ ಕೆಲವು
$\frac{1}{4}$ ಶಿಷ್ಯರು ಗುರುವನ್ನು ನಿಂದಿಸಬಹುದು ಮತ್ತು/
ಬಿಟ್ಟುಹೋಗಬಹುದು. ಗುರುವಿನ ಪ್ರೀತಿ
ನಿಜವಾಗಿಯೂ ಬೇಕಿದ್ದಲ್ಲಿ ನಿಸ್ವಾರ್ಥ
ಭಾವದಿಂದ ಸೇವೆಗೆ ನಿರತನಾಗಬೇಕು. ಗುರು
ನಿಂದನೆಯಿಂದ ಉಂಟಾದ ಪಾ/ಪವನ್ನು $\frac{1}{2}$
ಭಗವಂತನೂ ಸಹ ಕ್ಷಮಿಸಲಾರ.

ಗುರು ಮತ್ತು ಭಗವಂತ ಇಬ್ಬರೂ
ಪ್ರತಿಯೊಬ್ಬರಲ್ಲೂ ಇದ್ದಾರೆ. ಆದರೆ ಸಾಧನೆಯ
ಪ್ರಾರಂಭದಲ್ಲಿ ಹೊರಗಿ/ನ ಗುರುವಿನ $\frac{3}{4}$
ಅಗತ್ಯವಿದೆ. ಸಾಧಕನು ಒಂದು ನಿರ್ದಿಷ್ಟವಾದ
ಹಂತವನ್ನು ತಲುಪಿದ ಬಳಿಕ ಎಲ್ಲಾ ವಸ್ತುವಿನ
ಮೂಲತತ್ವಗಳನ್ನು ಅರಿಯಬಲ್ಲ.X 7

ಮಾನ್ಯರೇ,

ಕರ್ನಾಟಕ ಲೋಕಸೇವಾ ಆಯೋಗವು
ವಿವಿಧ ದರ್ಜೆಯ ಗುಮಾಸ್ತರ ಮತ್ತು
ಅಧಿಕಾರಿಗಳ ಹುದ್ದೆಗಳಿಗೆ ಸ್ಪರ್ಧಾ
ಪರೀಕ್ಷೆಗಳನ್ನು ನಡೆಸುತ್ತಿ/ರುವ ವಿಚಾರ ತಮಗೆ $\frac{1}{4}$
ತಿಳಿದಿದೆ. ಈಗಾಗಲೇ ಆಯೋಗವು ಕಳೆದ
ವರ್ಷ ಏಪ್ರಿಲ್ ತಿಂಗಳಿನಲ್ಲಿ ಪ್ರಥಮ ಮತ್ತು
ದ್ವಿತೀಯ ದರ್ಜೆಯ ಗುಮಾಸ್ತರ ಹುದ್ದೆ/ಗಳಿಗೆ $\frac{1}{2}$
ಪರೀಕ್ಷೆ ನಡೆಸಿದೆ. ಪ್ರಥಮ ದರ್ಜೆಯ
ಗುಮಾಸ್ತರ ಹುದ್ದೆಗಳಿಗೆ ಒಂದು ಲಕ್ಷ
ಅಭ್ಯರ್ಥಿಗಳು ಮತ್ತು ದ್ವಿತೀಯ ದರ್ಜೆಯ

$\frac{3}{4}$ ಗುಮಾಸ್ತರ ಹುದ್ದೆಗಳಿ/ಗೆ ಎರಡು ಲಕ್ಷ
ಅಭ್ಯರ್ಥಿಗಳು ಹಾಜರಾಗಿದ್ದಾರೆ. ರಾಜ್ಯ
ಸರ್ಕಾರದ ಅನೇಕ ಇಲಾಖೆಗಳಲ್ಲಿ ಆಯೋಗವು
8 ಜಾಹೀರಾತು ಪ್ರಕಟಿಸಿದ ಹುದ್ದೆಗಳಿಗಿಂXತಲೂ
ಹೆಚ್ಚಾಗಿ ಸ್ಥಾನಗಳು ಖಾಲಿ ಇವೆಯೆಂದು
ತಿಳಿದುಬಂದಿದೆ. ಕೆಲವು ಇಲಾಖೆಗಳ
ಅಧಿಕಾರಿಗಳು ತಮ್ಮ ಇಲಾಖೆಯಲ್ಲಿ ಖಾಲಿ
$\frac{1}{4}$ ಇರುವ ಹುದ್ದೆಗ/ಳ ಸಂಖ್ಯೆ, ಮೀಸಲಾತಿ, ಅಂಕಿ
ಅಂಶಗಳನ್ನು ಕಳುಹಿಸಿಕೊಡುತ್ತಿದ್ದಾರೆ. ಆದರೆ
ಹಲವು ಇಲಾಖೆಗಳ ಅಧಿಕಾರಿಗಳು ಈ
$\frac{1}{2}$ ಬಗ್ಗೆ ಯಾವ ಮಾಹಿತಿಯನ್ನೂ/
ಕಳುಹಿಸಿಕೊಟ್ಟಿರುವುದಿಲ್ಲ. ಇದರಿಂದಾಗಿ
ಆಯೋಗವು ಪರೀಕ್ಷಾ ಫಲಿತಾಂಶಗಳನ್ನು
ಪ್ರಕಟಿಸಲು ಬಹಳ ತಡವಾಗುತ್ತಿದೆ. ಇದರಿಂದಾಗಿ
$\frac{3}{4}$ ತಮ್ಮ/ ಕಛೇರಿಯ ಕಾರ್ಯಚಟುವಟಿಕೆಗಳಿಗೆ
ತುಂಬಾ ತೊಂದರೆಯಾಗಿದೆ ಎಂದು ಆಯೋಗದ
ಕಾರ್ಯದರ್ಶಿಯವರು ತಮ್ಮ ಪತ್ರದಲ್ಲಿ
ತಿಳಿಸಿದ್ದಾರೆ. ಅಲ್ಲದೇ ಸಾXರ್ವಜನಿಕರಿಂದ 9
ಮತ್ತು ಅಭ್ಯರ್ಥಿಗಳಿಂದ ಒತ್ತಾಯ ಬರುತ್ತಿದೆ.
ಆದ್ದರಿಂದ ಇದರ ಬಗ್ಗೆ ತುರ್ತಾಗಿ ಕ್ರಮ
ಕೈಗೊಳ್ಳಬೇಕೆಂದು ಸೂಚಿಸಲಾಗಿದೆ. ವಿಳಂಬ/ಕ್ಕೆ $\frac{1}{4}$
ಅಸ್ಪದ ಕೊಡದೇ ಕೇಳಿರುವ ಮಾಹಿತಿಯನ್ನು
ಆದ್ಯತೆ ಮೇರೆಗೆ ಕಾರ್ಯದರ್ಶಿಗಳು, ಕರ್ನಾಟಕ
ಲೋಕಸೇವಾ ಆಯೋಗ ಇವರಿಗೆ
ಕಳುಹಿಸಿಕೊಡಬೇ/ಕೆಂದು ತಿಳಿಸಲಾಗಿದೆ. $\frac{1}{2}$
ಇದರ ಜೊತೆಯಲ್ಲಿ ತಮ್ಮ ಇಲಾಖೆಯಲ್ಲಿ
ಖಾಲಿಯಿರುವ ಬೆರಳಚ್ಚುಗಾರರ ಹಾಗೂ
ಶೀಘ್ರಲಿಪಿಗಾರರ ಹುದ್ದೆಗಳ ಅಂಕಿ ಅಂ/ಶಗಳು $\frac{3}{4}$
ಮತ್ತು ಮೀಸಲಾತಿ ಕುರಿತ ವಿವರವನ್ನು
ಒದಗಿಸಬಹುದಾಗಿದೆ.

ತಮ್ಮ ವಿಶ್ವಾಸಿ,

ಸರ್ಕಾರದ ಮುಖ್ಯ ಕಾರ್ಯದರ್ಶಿಯವರು

ಆಪ್ತ ಕಾರ್ಯದರ್ಶಿ X 10